**ದಿನಾಂಕಃ 30-05-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಹೆಚ್.ಕೆ. ವಕೀಲರಿಂದಃ**

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.ದಾವಾ ಶೆಡ್ಯೂಲ್ ಅ ದಲ್ಲಿ ನಮೂದಿಸಿದ ಜಮೀನುಗಳು ಗೇಮಪ್ಪ ರಾಮಪ್ಪ ಲಮಾಣಿರವರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸದರಿ ಗೇಮಪ್ಪರವರು ತಮ್ಮ ಜೀವಿತ ಅವಧಿಯಲ್ಲಿ ದಾವಾ ಜಮೀಗಳಿಗೆ ಸಂಬಂಧಿಸಿದಂತೆ ನಮ್ಮ ತಂದೆ ದೇಮಪ್ಪ ಅಲಿಯಾಸ ದ್ಯಾಮಪ್ಪರವರ ಹೆಸರಿಗೆ ಯಾವುದೇ ಮೃತ್ಯುಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

2. ಈ ದಾವೆಯನ್ನು ದಾಖಲಿಸಿದ ನಂತರ ಸದರಿ ಮೃತ್ಯುಪತ್ರದ ಬಗ್ಗೆ ನನ್ನ ತಂದೆ ನನಗೆ ಹೇಳಿರುತ್ತಾರೆ. ಸದರಿ ಈ ದಾವೆ ದಾಖಲಿಸಿದ ಕಾಲಕ್ಕೆ ನನ್ನ ತಂದೆ ಜೀವಂತ ಇದ್ದರು. ಸದರಿ ಈ ದಾವೆಯಲ್ಲಿ ನನ್ನ ತಂದೆ 1 ನೇ ಪ್ರತಿವಾದಿಯಾಗಿದ್ದರು ಎಂದರೆ ಸರಿ. ನನ್ನ ತಂದೆ 2021 ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ತನ್ನ ಜೀವಿತಾವಧಿಯಲ್ಲ ಸದರಿ ಈ ದಾವೆಯಲ್ಲಿ 1 ನೇ ಪ್ರತಿವಾದಿಯಾಗಿದ್ದರೂ ಸಹ ಸದರಿ ಮೃತ್ಯುಪತ್ರದ ಬಗ್ಗೆ ನಮೂದಿಸಿ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಹಾಗೂ ನನ್ನ ತಂದೆಯ ಜೀವಿತಾವಧಿಯಲ್ಲಿ ಅವರ ಸಾಕ್ಷ್ಯವನ್ನು ಈ ದಾವೆಯಲ್ಲಿ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನನ್ನ ತಂದೆ ಸದರಿ ಮೃತ್ಯುಪತ್ರದ ಆದಾರದ ಮೇಲೆ ತನ್ನ ಹೆಸರನ್ನು ದಾವಾ ಜಮೀಗಳಿಗೆ ದಾಖಲಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ ಹಾಗೂ ಸದರಿ ಮೃತ್ಯುಪತ್ರದ ಆಧಾರದ ಮೇಲೆ ದಾವಾ ಜಮೀನುಗಳಿಗೆ ಮಾಲೀಕನಾಗಿರುತ್ತೇನೆ ಎಂದು ಕೇಳಿ ಯಾವುದೇ ದಾವೆಯನ್ನು ಸಹ ಸಲ್ಲಿಸಿರಲಿಲ್ಲ ಎಂದರೆ ಸರಿ.

3. ನನ್ನ ತಂದೆ ಸದರಿ ಮೃತ್ಯುಪತ್ರವನ್ನು ನ್ಯಾಯಾಲಯಕ್ಕೆ ಈ ದಾವೆಯಲ್ಲಿ ಹಾಜರು ಪಡಿಸಿರುತ್ತಾರೆ. ನನ್ನ ತಂದೆ ದಿನಾಂಕಃ 14.02.1991 ರ ಮೃತ್ಯುಪತ್ರದ ಆಧಾರದ ಮೇಲೆ ದಾವಾ ಜಮೀಗಳಿಗೆ ಮಾಲೀಕರಾಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಹಾಗೂ ನನ್ನ ತಂದೆ ತನ್ನ ಜೀವಿತಾವಧಿಯಲ್ಲಿ ಸದರಿ ಮೃತ್ಯುಪತ್ರವನ್ನು ಹಾಜರ ಪಡಿಸದೇ ಇದ್ದರೂ ಸಹ ಹಾಜರು ಪಡಿಸಿರುತ್ತಾರೆ ಎಂದು

ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೃತ್ಯುಪತ್ರವನ್ನು ಈ ದಿನದವರೆಗೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ನನ್ನ ತಂದೆ ಹಾಜರು ಪಡಿಸಿದ್ದರು ಎನ್ನುತ್ತಾರೆ. ವಾದಿಯರಿಗೆ ತೊಂದರೆ ನೀಡಿ ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಈ ಮೊದಲು ಈ ದಾವೆಯಲ್ಲಿ ನನ್ನ ಸಾಕ್ಷಿ ವಿಚಾರಣೆ ಆಗಿರುತ್ತದೆ ಎಂದರೆ ಸರಿ. ವಾದಿಯರು ಗೇಮಪ್ಪ ಅಲಿಯಾಸ ಗೇಮಣ್ಣನವರ ಮೊಮ್ಮಕ್ಕಳು ಅಲ್ಲ ಎಂದು ನಾನು ನನ್ನ ಸಾಕ್ಷ್ಯದಲ್ಲಿ ಹೇಳಿಲ್ಲ. ವಾದಿಯರು ಸದರಿ ಗೇಮಪ್ಪ ರಾಮಪ್ಪ ಲಮಾಣಿರವರ ಮಗಳ ಮಕ್ಕಳು ಎಂದರೆ ಸರಿ. ವಾದಿಯರು ಸದರಿ ಗೇಮಪ್ಪ ರಾಮಪ್ಪ ಲಮಾಣಿರವರ ಮೊಮ್ಮಕ್ಕಳಾದ್ದರಿಂದ ದಾವಾ ಸ್ವತ್ತುಗಳಿಗೆ ವಾರಸಾನಾತೆಯಿಂದ ಸದರಿಯವರೇ ಮಾಲೀಕರು ಎಂದರೆ ಸರಿಯಲ್ಲ. ವಾದಿಯರ ಹಕ್ಕನ್ನು ಅಲ್ಲಗಳೆಯುವ ಉದ್ದೇಶದಿಂದ ನಾವು ಸುಳ್ಳು ಹಾಗೂ ಖೊಟ್ಟಿ ಮೃತ್ಯುಪತ್ರವನ್ನು ಸೃಷ್ಟಿಸಿ ಸುಳ್ಳು ಪ್ರತಿವಾದಿ ಪತ್ರವನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರು ವಾರಸಾನಾತೆಯಿಂದ ದಾವಾ ಸ್ವತ್ತುಗಳಿಗೆ ಮಾಲೀಕರಾಗಿದ್ದರಿಂದ ನಾವು ಸದರಿ ದಾವಾ ಸ್ವತ್ತುಗಳ ಕಬ್ಜೆಯನ್ನು ಹೊಂದಿದರದೇ ಇದ್ದರೂ ಸಹ ಹೊಂದಿದ್ದೇವೆ ಆದ್ದರಿಂದ ಸದರಿ ದಾವಾ ಸ್ವತ್ತುಗಳ ಮಾಲೀಕರು ನಾವು ಎಂದು ಹೆಚ್ಚುವರಿ ಪ್ರತಿವಾದಿ ಪತ್ರದಲ್ಲಿ ಸುಳ್ಳು ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಹಾಗೂ ಅದಕ್ಕೆ ಪೂರಕವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.